# ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ ಅಥಣಿ

ಅಸಲು ದಾವಾ ನಂ. **967/2019** ದಿನಾಂಕಃ **18.12.2023**

ಪಿ.ಡಬ್ಲ್ಯೂಃ **01**

---

18.12.2023 :ಸಾಕ್ಷಿಯನ್ನು ಈ ದಿನ ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು:

***

ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ವಕೀಲರಾದ ಶ್ರೀ.ಆರ್ ಎಸ್ ಬಿ ರವರಿಂದಃ-

ಸಾಕ್ಷಿಯು ತಾನು ಹಾಜರು ಪಡಿಸಿದ ದಾಖಲೆಗಳನ್ನು ನೋಡಿ ಗುರುತಿಸಿದ್ದು , ಸಾಕ್ಷಿಯು ಮೂಲ ನೊಂದಾಯಿತವಲ್ಲದ ಕ್ರಯ ಕರಾರು ಪತ್ರ ದಿಃ 28.09.2015 ನೇದನ್ನು ನೋಡಿ ಗುರುತಿಸುತ್ತಾರೆ. ಸದರಿ ಕರಾರು ಪತ್ರದ ಮೇಲೆ ಕೊರತೆ ಮುಂಧ್ರಾಂಕ ಮತ್ತು ದಂಡದ ಮುಂಧ್ರಾಂಕ ಶುಲ್ಕ ಒಟ್ಟು ರೂ.3300/- ಪಾವತಿಸಿದ್ದು, ಸದರಿ ದಾಖಲಾತಿಯನ್ನು ನಿಪಿ-10 ಎಂದು, ಸಾಕ್ಷಿಯು ಪ್ರತಿವಾದಿ ಸಹಿಯನ್ನು ನಿಪಿ-10 ರಲ್ಲಿ ನೋಡಿ ಗುರುತಿಸಿದ್ದು ಪ್ರತಿವಾದಿಯ ಸಹಿಯಗಳನ್ನು ನಿಪಿ-10 ಎ, 10 ಬಿ ಎಂದು, ಸಾಕ್ಷಿದಾರರಾದ ಎ ಆರ್ ಕೆಮಲಾಪುರ ಮತ್ತು ಎ ಎಸ್ ತಾಂವಶಿ ರವರ ಸಹಿಗಳನ್ನು ನೋಡಿ ಗುರುತಿದ್ದು, ಸದರಿ ಸಹಿಗಳನ್ನು ಕ್ರಮವಾಗಿ ನಿಪಿ-10 ಸಿ ಯಿಂದ 10 ಡಿ ಎಂದು, ಪತ್ರ ಬರಹಗಾರರಾದ ಕೆ ಪಿ ಕುಲಕರ್ಣಿ ರವರ ಸಹಿಯನ್ನು ನೋಡಿ ಗುರುತಿಸಿದ್ದು ನಿಪಿ-10 ಇ ಎಂದು, ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 10 ಎಫ್ ಎಂದು ಗುರುತಿಸಲಾಯಿತು. ಸಾಕ್ಷಿಯು ಮೂಲ ನೊಂದಾಯಿತವಲ್ಲದ ಬರಪಾಯಿ ಪತ್ರ ದಿಃ 03.05.2016 ನೇದನ್ನು ನೋಡಿ ಗುರುತಿಸುತ್ತಾರೆ. ಈ ಹಂತದಲ್ಲಿ ಮಾನ್ಯ ಪ್ರತಿವಾದಿ ಪರ ವಕಿಲರು ಸದರಿ ದಾಖಲಾತಿಯನ್ನು ರುಜುವಾತು ಪಡಿಸುವಿಕೆಯ ಷರತ್ತಿಗೊಳಪಟ್ಟು ಗುರುತಿಸಬೇಕೆಂದು ಕೋರಿಕೊಂಡಿರುತ್ತಾರೆ. ಸದರಿ ದಾಖಲಾತಿಯನ್ನು ಪರಿಶೀಲಿಸಲಾಯಿತು. ಸದರಿ ದಾಖಲಲಾತಿಯನ್ನು ರುಜುವಾತುಪಡಿಸುವಿಕೆಯ ಷರತ್ತಿಗೊಳಪಟ್ಟು ನಿಪಿ-11 ಎಂದು, ಸಾಕ್ಷಿಯು ಪ್ರತಿವಾದಿ ಸಹಿಯನ್ನು ನಿಪಿ-11 ರಲ್ಲಿ ನೋಡಿ ಗುರುತಿಸಿದ್ದು ಪ್ರತಿವಾದಿಯ ಸಹಿಯಗಳನ್ನು ನಿಪಿ-11 ಎ, ಎಂದು, ಸಾಕ್ಷಿದಾರರಾದ ಎ ಆರ್ ಕೆಮಲಾಪುರ ಮತ್ತು ಎ ಎಸ್ ತಾಂವಶಿ, ಸಾಗರ ತೇರದಾಳ ರವರ ಸಹಿಗಳನ್ನು ನೋಡಿ ಗುರುತಿದ್ದು, ಸದರಿ

ಸಹಿಗಳನ್ನು ಕ್ರಮವಾಗಿ ನಿಪಿ-11 ಬಿ ಯಿಂದ 11 ಡಿ ಎಂದು, ಪತ್ರ ಬರಹಗಾರರಾದ ಕೆ ಪಿ ಕುಲಕರ್ಣಿ ರವರ ಸಹಿಯನ್ನು ನೋಡಿ ಗುರುತಿಸಿದ್ದು ನಿಪಿ-11 ಇ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-10 ಮತ್ತು 11 ರಲ್ಲಿರುವ ಪ್ರತಿವಾದಿಯ ಪೋಟೊ ಮತ್ತು ಹೆಬ್ಬೆಟ್ಟಿನ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ.

(ಪ್ರತಿವಾದಿ ಪರ ವಕೀಲರು ಪಾಟೀಸವಾಲಿಗೆ ಸಮಯ ಕೋರಿರುತ್ತಾರೆ, ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

(ಜಗದೀಶ ಬಿಸೆರೊಟ್ಟಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ.ನ್ಯಾಯಾಲಯ, ಅಥಣಿ